**IN THE COURT OF THE SENIOR CIVIL JUDGE AND JMFC, TIPTUR.**

**OS No. 71/2022**

**PW-1**

**Oath is Administered to the Witness on 01.08.2025.**

**Further Cross Examination by: Sri. T.K.U. Counsel for Defendant**

ನಿಪಿ-3 ರಲ್ಲಿ ಹೇಳಿದಂತೆ ಕಾಲಮಿತಿ ಇತ್ತು ಎನ್ನುವ ವಿಷಯ ನನಗೆ ತಿಳಿದಿತ್ತು ಎಂದರೆ ನಿಜ. ನಿಪಿ-3 ರಲ್ಲಿ 11 ತಿಂಗಳ ಒಳಗಾಗಿ ಆ ವ್ಯವಹಾರ ಪೂರ್ಣಗೊಳ್ಳಬೇಕು ಎನ್ನುವ ಷರತ್ತು ಇತ್ತು ಎಂದರೆ ನಿಜ. ನಾನು ಈ ದಾವೆಯು ನಿಪಿ-3 ಪತ್ರ ಆದ ನಾಲ್ಕು ವರ್ಷಗಳ ಬಳಿಕ ಈ ದಾವೆಯನ್ನು ಸಲ್ಲಿಸಿದ್ದೇನೆ. ನಾನು ನಿಪಿ-6 ನೋಟೀಸನ್ನು ಅಂಚೆ ಇಲಾಖೆಯ ಮುಖಾಂತರ ಕಳುಹಿಸಿದ್ದೇನೆ ಎಂದು ಹೇಳಿದ್ದು, ಆ ರೀತಿ ನೋಟೀಸನ್ನು, ಈಮೇಲ್, ವಾಟ್ಸ್ ಅಫ್, ಕೋರಿಯರ್ ಮತ್ತು ಸಾಧಾರಣ ಅಂಚೆ ಮುಖಾಂತರ ಕಳುಹಿಸಿರಲಿಲ್ಲ. ಆ ರೀತಿ ಕಳುಹಿಸಬಹುದು ಎಂದು ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ನಿಪಿ-6 ರ ಹಿಂಭಾಗದಲ್ಲಿರುವ ಅಂಚೆ ಲಕೋಟೆಯ ಮೇಲೆ ಇರುವಂತಹ ಮುದ್ರೆಯಲ್ಲಿ ದಿಃ23.08.2019 ಎಂದು ಬರೆಯಲಾಗಿದ್ದು ಆ ದಿನದಂದು ನಾನು ನೋಟೀಸನ್ನು ಕಳುಹಿಸಿದ್ದೇನೋ, ಇಲ್ಲವೋ ಎಂದು ನನಗೆ ನೆನಪು ಇರುವುದಿಲ್ಲ. ನಿಪಿ-6 ನೋಟೀಸ್ ಕಳುಹಿಸಿದ್ದೇನೆ ಎಂದು ಹೇಳಿದ್ದು, ನಾನು 3 ವರ್ಷಗಳ ಬಳಿಕ ಸಹ ನಿಪಿ-8 ರಂತೆ ನೋಟೀಸ್ ಕಳಕುಹಿಸಿರುತ್ತೇನೆ ಎಂದರೆ ನಿಜ. ನಾನು ಸದರಿ ನಿಪಿ-8 ನೋಟೀಸನ್ನು ಪ್ರತಿವಾದಿಯು ನನಗೆ ನಿಪಿ-7 ರಂತೆ ನೋಟೀಸನ್ನು ಕೊಟ್ಟಿದ್ದರಿಂದ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ನಿಪಿ-3 ಕರಾರುಪತ್ರ ಆಗಿದೆ ಎಂದು ಹೇಳಿದ್ದು, ಆ ದಿನದಿಂದ ಪ್ರತಿವಾದಿಗೆ ನಿಪಿ-8 ನೋಟೀಸ್ ಕೊಡುವವರೆವಿಗೂ ನಾನು ಯಾವುದೇ ಹಣವನ್ನು ಪ್ರತಿವಾದಿಗೆ ಕೊಟ್ಟಿಲ್ಲ ಎಂದರೆ ನಿಜ. ನಾನು ನಿಪಿ-8 ನೋಟೀಸ್ ಕೊಡುವ ಕಾಲದಲ್ಲಿ ಪ್ರತಿವಾದಿಯು

ನ ನಗೆ  ನಿಪಿ-7 ರಲ್ಲಿ ಕೊಟ್ಟಂತಹ ನೋಟೀಸ್ ನಲ್ಲಿರುವ ಅಂಶಗಳನ್ನು ಓದಿ ತಿಳಿದುಕೊಂಡಿರುತ್ತೇನೆ.  ಸಾಕ್ಷಿಯು ನಿಪಿ-7 ರಲ್ಲಿ ಸುಳ್ಳು ಅಂಶಗಳನ್ನು ಹೇಳಿ ನೋಟೀಸ್ ಕೊಟ್ಟಿದ್ದರು ಎಂದು ಹೇಳುತ್ತಾರೆ.  ನಿಪಿ-6 ರಲ್ಲಿ ನಾನು 30 ದಿನಗಳ ಒಳಗಾಗಿ ಪ್ರತಿವಾದಿಯು ಕ್ರಯಪತ್ರ ಬರೆದುಕೊಡದೇ ಇದ್ದಲ್ಲಿ, ನಾನು ಸ್ವತಃ ಕ್ರಯಪತ್ರವನ್ನು ಹೊಂದುವುದಾಗಿ ಹೇಳಿ ಬರೆಸಿರುತ್ತೇನೆ.  ನಿಪಿ-3 ಕರಾರುಪತ್ರ ಆಗಿದೆ ಎಂದು ಹೇಳುವ ದಿನದಿಂದ ನಿಪಿ-8 ನೋಟೀಸ್ ಕೊಡುವವರೆವಿಗೂ ಕ್ರಯಪತ್ರವನ್ನು ಮಾಡಿಸಿಕೊಳ್ಳಲು ನನಗೆ ತೊಂದರೆ ಇರಲಿಲ್ಲ. ನಿಪಿ-3  ಆಗುವ ಸಮಯದಿಂದ ನಿಪಿ-8 ಆಗುವ ಸಮಯದವರೆವಿಗೂ ನಾನು ಮತ್ತು ಪ್ರತಿವಾದಿ ಅನ್ಯೂನ್ಯವಾಗಿ ಇದ್ದೆವು ಎಂದರೆ ಸಾಕ್ಷಿಯು ನಿಪಿ-8 ನೋಟೀಸ್ ಕೊಡುವ ಸ್ವಲ್ಪ ದಿನಗಳ ಹಿಂದಿನವರೆವಿಗೂ ಚೆನ್ನಾಗಿ ಇದ್ದೆವು ಎಂದು ಹೇಳುತ್ತಾರೆ ಮತ್ತು ನಿಪಿ-8 ನೋಟೀಸ್ ಕೊಡುವ ಸಮಯದಲ್ಲಿ ನನ್ನ ಮತ್ತು ಅವರ ಸಂಬಂಧ ಚೆನಾನ್ನಗಿ ಇರಲಿಲ್ಲ ಎಂದು ಹೇಳುತ್ತಾರೆ.

ನಿಪಿ-8 ನೋಟೀಸ್ ಕೊಡುವ ಮೊದಲು ದಿಃ16.06.2020 ರಂದು ಪ್ರತಿವಾದಿಯವರ ಬ್ಯಾಂಕ್ ಖಾತೆಯಿಂದ ನನ್ನ ಬ್ಯಾಂಕ್ ಖಾತೆಗೆ NEFT ಮೂಲಕ 15 ಲಕ್ಷ ರೂಪಾಯಿ ಬಂದಿರುವ ವಿಷಯ ನನಗೆ ತಿಳಿದಿತ್ತು.  ಆ ರೀತಿ 15 ಲಕ್ಷ ರೂಪಾಯಿ ಹಣ ಬಂದಿರುವ ಬಗ್ಗೆ ನಾನು ನಿಪಿ-8 ನೋಟೀಸನ್ನು ಕೊಡುವ ಸಮಯದಲ್ಲಿ ನಮ್ಮ ವಕೀಲರಿಗೆ ತಿಳಿಸಿರಲಿಲ್ಲ.  ನಾನು ಈ ದಾವೆಯನ್ನು ಹಾಕುವ ಕಾಲಕ್ಕೆ ಆ ರೀತಿ 15 ಲಕ್ಷ ರೂಪಾಯಿ ನನ್ನ ಖಾತೆಗೆ ಬಂದಿರುವ ವಿಷಯ ನಮ್ಮ ವಕೀಲರಿಗೆ ತಿಳಿಸಿರಲಿಲ್ಲ.  ಸಾಕ್ಷಿಯು ಸ್ವ ಇಚ್ಛೆಯಿಂದ ಆ ಹಣಕ್ಕೂ ಮತ್ತು ದಾವೆಗೂ ಸಂಬಂಧ ಇಲ್ಲ ಎಂದು ನಾನು ನಮ್ಮ ವಕೀಲರಿಗೆ ತಿಳಿಸಿಲ್ಲ ಎಂದು ಹೇಳುತ್ತಾರೆ.  ನಿಪಿ-7 ರಲ್ಲಿ ಆ ರೀತಿ 15 ಲಕ್ಷ ರೂಪಾಯಿ ಹಣ ಕಳುಹಿಸಿರುವುದಾಗಿ ಪ್ರತಿವಾದಿಯು ಹೇಳಿಕೊಂಡಿದ್ದನ್ನು ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ಸದರಿ 15 ಲಕ್ಷ ಹಣ ನನ್ನ ಖಾತೆ ಇರುವ ಎಸ್ ಬಿ ಐ ವೆಸ್ಟ್ ಆಫ್ ಕಾರ್ಡ್ ರೋಡ್ ಬೆಂಗಳೂರು ಅಂದರೆ ನಿಪಿ-5 ಸ್ಟೇಟ್ ಮೆಂಟ್ ನಲ್ಲಿ ಇರುವ

ಖಾತೆಗೆ ಬಂದಿರುತ್ತದೆ ಎಂದರೆ ನಿಜ. ನಿಪಿ-7 ರಲ್ಲಿ 15 ಲಕ್ಷ ರೂಪಾಯಿ ಹಣ ನಗದು ರೂಪದಲ್ಲಿಯೂ ಸಹ ಕೊಟ್ಟಿರುವುದಾಗಿ ಹೇಳಿದ್ದಾರೆ ಎಂದರೆ ಆ ರೀತಿ ಸುಳ್ಳು ಬರೆದಿದ್ದಾರೆ ಎಂದು ಹೇಳುತ್ತಾರೆ. ನಿಪಿ-7 ರಲ್ಲಿ ಪ್ರತಿವಾದಿಯು 15 ಲಕ್ಷ ರೂಪಾಯಿ ನಗದಾಗಿ ಕೊಟ್ಟಿದ್ದಾಗಿ ಮತ್ತು ಅದಕ್ಕೆ ರಶೀದಿ ಕೇಳಿದಾಗ ನಾನು ಆತನಿಗೆ ಉಳಿದ 15 ಲಕ್ಷ ಬ್ಯಾಂಕ್ ಖಾತೆಗೆ ಹಾಕಿ ನಂತರ ಅದರ ರಶೀದಿ ಕೊಡುತ್ತೇನೆ ಎಂದು ಹೇಳಿದ್ದೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ಆ ರೀತಿ ಸುಳ್ಳು ಬರೆಯಲಾಗಿದೆ ಎಂದು ಹೇಳುತ್ತಾರೆ.

ನಿಪಿ-3 ರಲ್ಲಿ 30 ಲಕ್ಷ ನಾನು ಪ್ರತಿವಾದಿಗೆ ಕೊಟ್ಟಿರುವುದಾಗಿ ಬರೆಯಲಾಗಿದೆ. ಆ ರೀತಿ 30 ಲಕ್ಷ ರೂಪಾಯಿ ಹಣವನ್ನು ಪ್ರತಿವಾದಿಯು ನಗದು ಮತ್ತು NEFT ಮೂಲಕ ನನಗೆ ಪಾವತಿ ಮಾಡಿದ್ದಾಗಿ ನಿಪಿ-7 ರಲ್ಲಿ ಬರೆದಿದ್ದಾರೆ ಎಂದರೆ ಸಾಕ್ಷಿಯು ಆ ರೀತಿ ಸುಳ್ಳು ಬರೆದಿದ್ದಾರೆ ಎಂದು ಹೇಳುತ್ತಾರೆ. ನಿಪಿ-7 ರ ನೋಟೀಸ್ ನಲ್ಲಿ ನನಗೆ ಬರುವಂತಹ ಹಣವನ್ನು ಕೊಡಲಾಗಿದೆ ಮತ್ತು ಆ ಕಾರಣದಿಂದ ನಿಪಿ-3 ಕರಾರುಪತ್ರವನ್ನು ಸಬ್ ರಿಜಿಸ್ಟ್ರಾರ್ ರವರ ಕಚೇರಿಗೆ ಬಂದು ರದ್ದುಪಡಿಸಬೇಕೆಂದು ಬರೆಯಲಾಗಿದೆ ಎಂದರೆ ನಿಜ. ನಿಪಿ-7 ನೋಟೀಸನ್ನು ಕೊಟ್ಟ ದಿನದಂದೇ ನಿಪಿ-3 ಕರಾರುಪತ್ರ ರದ್ದತಿಯಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-7 ರಲ್ಲಿ ನನಗೆ 15 ಲಕ್ಷ ನಗದು ಮತ್ತು 15 ಲಕ್ಷ NEFT ಮೂಲಕ ಹಣ ಪಾವತಿ ಮಾಡಿದ್ದಾರೆ ಮತ್ತು ನಿಪಿ-3 ಕರಾರುಪತ್ರ ರದ್ದತಿ ಆಗಿದೆ ಎಂದು ಹೇಳಿದ್ದರಿಂದ ನಾನು ನಿಪಿ-8 ನೋಟೀಸನ್ನು ಪ್ರತಿವಾದಿಗೆ ಕಳುಹಿಸಿರುತ್ತೇನೆ ಎಂದರೆ ನಿಜ. ಹಣ ಬಂದಿರುವುದನ್ನು ನಿಜ ಎಂದು ನಿಪಿ-8 ರ ಮೂಲಕ ನಾನು ಒಪ್ಪಿಕೊಂಡಿರುತ್ತೇನೆ. ಆದರೆ ಆ ಹಣಕ್ಕೂ ಮತ್ತು ಈ ದಾವೆಗೂ ಯಾವುದೇ ಸಂಬಂಧ ಇರುವುದಿಲ್ಲ. ನಿಪಿ-3 ಕರಾರುಪತ್ರ ಆದ ಬಳಿಕ ನನ್ನ ಮತ್ತು ಪ್ರತಿವಾದಿಯ ನಡುವೆ ಬೇರೆ ಯಾವುದೇ ವ್ಯವಹಾರಗಳು ಆಗಿರುವುದಿಲ್ಲ. ನನ್ನ ಮತ್ತು ಪ್ರತಿವಾದಿಯ ನಡುವೆ ಹಣಕಾಸಿನ ವ್ಯವಹಾರ ಆಗಿತ್ತು ಮತ್ತು ಆ ಕಾರಣದಿಂದ ನಿಪಿ-3 ಪತ್ರವನ್ನು ಪ್ರತಿವಾದಿ

ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಬರಬೇಕಾದ ಹಣ ಪೂರ್ತಿ ಬಂದಿರುವ ಕಾರಣ ನಾನು 2022ರ ವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿ ಇಬ್ಬರೂ ಸಹ ವ್ಯಾಪಾರಸ್ಥರು ಎಂದರೆ ನಿಜ. ಹಣಕಾಸಿನ ವ್ಯವಹಾರ ಆಗಿರುವುದನ್ನು ಪ್ರತಿವಾದಿಯು ಸಂಪೂರ್ಣವಾಗಿ ಮರುಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಆಸ್ತಿಯನ್ನು ಪಡೆದುಕೊಳ್ಳಬೇಕು ಮತ್ತು ಆತನಿಗೆ ಮೋಸ ಮಾಡಬೇಕು ಎನ್ನುವ ಅಭಿಪ್ರಾಯ ನನಗೆ ಇರುವುದಿಲ್ಲ. ನಿಪಿ-3 ಪತ್ರವು ರದ್ದತಿ ಮಾಡಿಕೊಳ್ಳುವ ಸಲುವಾಗಿ ನಾನು ಸಬ್ ರಿಜಿಸ್ಟ್ರಾರ್ ಕಚೇರಿಗೆ ಬಾರದೇ ಇರುವ ಕಾರಣ ನನ್ನ ಮತ್ತು ಪ್ರತಿವಾದಿಯ ನಡುವೆ ವೈಮನಸ್ಸು ಉಂಟಾಗಿತ್ತು ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯ ನಡುವೆ ನಿಪಿ-7 ನೋಟೀಸ್ ಬಂದ ಬಳಿಕ ವೈಮನಸ್ಸು ಪ್ರಾರಂಭವಾಗಿತ್ತು ಎಂದರೆ ನಿಜ.

ಮರು ವಿಚಾರಣೆ - ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

(ಮೊಹಮ್ಮದ್ ಆರೀಫುಲ್ಲಾ ಸಿ.ಎಫ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.